ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ-ಆಡಳಿತ ವರ್ಗಾವಣೆ 01/2018-19 ದಿನಾಂಕ : 02.08.2018

**ವೈಯಕ್ತಿಕ ಗಮನಕ್ಕಾಗಿ**

## ಸುತ್ತೋಲೆ

ವಿಷಯ: **Teacher's Data Software** ತಂತ್ರಾಂಶದಲ್ಲಿ ಅಳವಡಿಸಿರುವ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ – ಬಿ ವೃಂದದ ಅಧಿಕಾರಿಗಳ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಅಂತಿಮವಾಗಿ ಪರಿಶೀಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆಗಳು ದಿನಾಂಕ: 24.06.2017 ,17.07.2017, 08.09.2017, 23.10.2017, 07.12.2017, 20.01.2018, 18.07.2018

**Teacher's Data Software** ತಂತ್ರಾಂಶದಲ್ಲಿ, ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ – ಬಿ ವೃಂದದ ಅಧಿಕಾರಿಗಳ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಅಳವಡಿಸಲು ಸೂಚಿಸಲಾಗಿದ್ದು, ಈ ಕಛೇರಿಯಿಂದ ಉಲ್ಲೇಖಿತ ಸುತ್ತೋಲೆಗಳ ಮೂಲಕ ತಂತ್ರಾಂಶದಲ್ಲಿ ಶಿಕ್ಷಕರ ಮಾಹಿತಿಯನ್ನು ಅಳವಡಿಸಲು ಹಲವಾರು ಬಾರಿ ಸುದೀರ್ಘವಾಗಿ ಮಾರ್ಗದರ್ಶನ ನೀಡಲಾದರೂ ಈವರೆವಿಗೂ ನಿಮ್ಮ ಜಿಲ್ಲೆಯಲ್ಲಿರುವ ಶಿಕ್ಷಕರ ಮಾಹಿತಿಯನ್ನು ಸದರಿ ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಸದೇ ಇರುವುದು ವಿಷಾದನೀಯ.

ಈ ಹಿನ್ನಲೆಯಲ್ಲಿ ಅಂತಿಮವಾಗಿ ಜಿಲ್ಲಾ ಹಂತದಲ್ಲಿ ನಿಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು **Teacher's Data Software** ತಂತ್ರಾಂಶದಲ್ಲಿ ಅಳವಡಿಸಲು ಮತ್ತು ಸಂಪೂರ್ಣವಾಗಿ ಪರಿಶೀಲಿಸಿ ಅಪ್‌ಡೇಟ್(**Update**) ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

**ಅದರಂತೆ ಈ ಕೆಳಗೆ ಪ್ರಸ್ತಾಪಿಸಿದ ಅಂಶಗಳ ಬಗ್ಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ವೈಯಕ್ತಿಕವಾಗಿ ಗಮನಹರಿಸಿ ದಿನಾಂಕ: 06.08.2018 ರೊಳಗೆ ಕ್ರಮವಹಿಸಲು ಈ ಮೂಲಕ ಸೂಚಿಸಿದೆ ಹಾಗೂ ದಿನಾಂಕ:04.08.2018 ರಂದು ಈ ವಿಚಾರವಾಗಿ ವಿಡಿಯೋ ಕಾನ್ಫರೆನ್ಸ್ ನಲ್ಲಿ ಚರ್ಚಿಸಲಾಗುವುದು.**

- ನಿಮ್ಮ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ – ಬಿ ವೃಂದದ ಅಧಿಕಾರಿಗಳ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಅಳವಡಿಸುವುದು ಕಡ್ಡಾಯವಾಗಿದೆ. ಯಾವುದೇ ಕಾರಣಕ್ಕೂ ಯಾವುದೇ ಶಿಕ್ಷಕರ ಸೇವಾ ಮಾಹಿತಿಯು ಅಪೂರ್ಣವಾಗದೇ ಇರುವಂತೆ ಗಮನಿಸತಕ್ಕದ್ದು.

- ಯಾವುದೇ ಶಿಕ್ಷಕರ ಸೇವಾ ಮಾಹಿತಿಯಲ್ಲಿ ಈ ಹಂತದಲ್ಲಿ ಬದಲಾವಣೆ ಮಾಡಬೇಕಾದ ಸಂದರ್ಭದಲ್ಲಿ ಸದರಿ ತಂತ್ರಾಂಶದಲ್ಲಿ ಬದಲಾವಣೆ ಮಾಡಲು(**Modification**) ಅವಕಾಶ ನೀಡಲಾಗಿದೆ.

- ಈಗಾಗಲೇ ಈ ಕಛೇರಿಯ ಹಂತದಲ್ಲಿ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು ತತ್ಸಮಾನ ವೃಂದದ(ಎ.ಪಿ.ಸಿ.ಒ, ಬಿಆರ್.ಸಿ, ವಿಷಯ ಪರಿವೀಕ್ಷಕರು) ಅಧಿಕಾರಿಗಳನ್ನು ಕೌನ್ಸಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗಿದೆ ಈ ಮಾಹಿತಿಯನ್ನೂ ಸಹ ಸದರಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡತಕ್ಕದ್ದು.

ಈ ಮೇಲೆ ಪ್ರಸ್ತಾಪಿಸಿದ ಅಂಶಗಳ ಬಗ್ಗೆ ತಪ್ಪದೇ ಕ್ರಮವಹಿಸಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ನಿಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್–ಬಿ ವೃಂದದ ಅಧಿಕಾರಿಗಳ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಅಳವಡಿಸಿರುವ ಬಗ್ಗೆ ದೃಡೀಕರಣವನ್ನು ಉಪನಿರ್ದೇಶಕರು(ಆಡಳಿತ) ಇವರು ಅವರ ಸ್ವಂತ ಬರವಣಿಗೆಯಲ್ಲಿ ಬರೆದು ದೃಡೀಕರಣವನ್ನು ಮಾಡಿ, ನಿಮ್ಮ ಕಛೇರಿಯ ಪತ್ರಾಂಕಿತ ಸಹಾಯಕರು/ಪತ್ರಾಂಕಿತ ವ್ಯವಸ್ಥಾಪಕರ/ಶಿಕ್ಷಣಾಧಿಕಾರಿಗಳ ಮೂಲಕ ಮುದ್ದಾಂ ಮಾನ್ಯ ಆಯುಕ್ತರನ್ನು ಭೇಟಿ ಮಾಡಿ ದಿನಾಂಕ:07-08-2018ರಂದು ನೀಡುವುದು. ತಪ್ಪಿದ್ದಲ್ಲಿ ಉಪನಿರ್ದೇಶಕರು(ಆಡಳಿತ) ಇವರು ನೇರವಾಗಿ ಹೊಣೆಗಾರರಾಗುವರು.

2/8/18

**ಅಪರ ನಿರ್ದೇಶಕರು(ಆಡಳಿತ)**

ಪ್ರತಿಯನ್ನು

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ನೀಡಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,
5. ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.

**ಉಪನಿರ್ದೇಶಕರ ಕಛೇರಿ ---------ಜಿಲ್ಲೆ**

**ಧೃಢೀಕರಣ ಪತ್ರ**

ಶ್ರೀ/ಶ್ರೀಮತಿ. ------------------ಆದ ನಾನು ಉಪನಿರ್ದೇಶಕರು (ಆಡಳಿತ) -----------ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿರುವ --------ಸಂಖ್ಯೆ ಪ್ರಾಥಮಿಕ ಶಾಲಾ ತತ್ಸಮಾನ ವೃಂದದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ.

ನಮ್ಮ ಜಿಲ್ಲೆಯಲ್ಲಿರುವ --------ಸಂಖ್ಯೆ ಪ್ರೌಢಶಾಲಾ ತತ್ಸಮಾನ ವೃಂದದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ.

ನಮ್ಮ ಜಿಲ್ಲೆಯಲ್ಲಿರುವ --------ಸಂಖ್ಯೆ ಎಲ್ಲಾ ಸರ್ಕಾರಿ ಪ್ರೌಡಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ – ಬಿ ವೃಂದದ ಅಧಿಕಾರಿಗಳ ಸೇವಾ ಮಾಹಿತಿಯನ್ನು **Teacher's Data Software** ತಂತ್ರಾಂಶದಲ್ಲಿ ಸಂಪೂರ್ಣವಾಗಿ ಅಳವಡಿಲಾಗಿದೆ.

ಈ ಮೇಲೆ ಪ್ರಸ್ತಾಪಿಸಿದ ಎಲ್ಲಾ ಶಿಕ್ಷಕರ ಸೇವಾ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವುದು ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ. ಹಾಗೂ ನಮ್ಮ ಜಿಲ್ಲೆಯಲ್ಲಿ ಯಾವುದೇ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರ, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸೇವಾ ಮಾಹಿತಿ ಬಾಕಿ ಉಳಿದಿದ್ದಲ್ಲಿ, ಇಂದಿಕರಿಸದಿದ್ದಲ್ಲಿ(**update**) ನಾನೇ ವೈಯಕ್ತಿಕವಾಗಿ ಜವಾಬ್ದಾರನಾಗಿರುತ್ತೇನೆ.

ದಿನಾಂಕ:

ಸ್ಥಳ: ಉಪನಿರ್ದೇಶಕರು(ಆಡಳಿತ)